◆ ಟೀವಿ ಮಾಧ್ಯಮದ ಕಾರಣದಿಂದ ರಂಗಭೂಮಿಗೆ ಪ್ರೇಕ್ಷಕರು ಕಡಿಮೆ ಆಗುತ್ತಿದ್ದಾರೆ ಎನ್ನುವ ಮಾತು ರಂಭೂಮಿಯ ಕೆಲ ಹಿರಿಯರಿಂದಲೇ ಕೇಳಿ ಬರುತ್ತಿದೆಯಲ್ಲ?

ಇದು ತಪ್ಪು. ಇವು ಬಿಡುಬೀಸಿನ ಹೇಳಿಕೆಗಳಷ್ಟೇ. ಪ್ರೇಕ್ಷಕರೇ ಇಲ್ಲ ಅಂದ ಮೇಲೆ ನಾಟಕವನ್ನು ಏಕೆ ಮಾಡಬೇಕು? ಎಲ್ಲ ನಾಟಕಗಳಿಗೂ ಜನರು ಬರುತ್ತಾರೆ. ಆದರೆ ಹೇಗೆ ಪ್ರದರ್ಶನ ಮಾಡುತ್ತೀರಿ ಎನ್ನುವುದರ ಮೇಲೆ ನಿಂತಿದೆ. 'ನೀನಾಸಂ', 'ರಂಗಾಯಣ'ದ ಪ್ರಯೋಗಗಳಿಗೆ ಜನರು ತುಂಬಿರುತ್ತಾರೆ. ನಾವು ನಾಟಕಗಳನ್ನು ವೃತ್ತಿಪರವಾಗಿ ಮಾಡಿದರೆ ಜನರು ಬರುತ್ತಾರೆ. ನಾಟಕಗಳಿಗೆ ಜನರನ್ನು ಕೂರಿಸುವ ಶಕ್ತಿ ಇರಬೇಕು.

ಪ್ರಶ್ನಿಸಬೇಕು. ಅವು ಸ್ವಾಯತ್ತತೆ ಉಳಿಸಿಕೊಳ್ಳುವ ದಿಕ್ಕಿನಲ್ಲಿ ಕೆಲಸ ಮಾಡಬೇಕು. ಹೀಗಿದ್ದಾಗ ಮಾತ್ರ ಅಕಾಡೆಮಿಗಳು ಪ್ರಜಾಸತ್ತಾತ್ಮಕವಾಗಿರುತ್ತವೆ. ಆದರೆ ಇಂದಿನ ದಿನಗಳಲ್ಲಿ ಆ ರೀತಿ ಅಕಾಡೆಮಿಗಳು ಇಲ್ಲ. ಆಳುವವರ ಅಡಿಯಾಳಾಗಿ ಕೆಲಸ ಮಾಡುತ್ತಿವೆ.

◆ 2013ರಲ್ಲಿ ನೀವು ತಿಪಟೂರು ತಾಲ್ಲೂಕು ಮೂರನೇ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದಾಗ ಪ್ರತಿಭಟನೆ ಸಹ ವ್ಯಕ್ತವಾಗಿತ್ತು...

ಅಂದು ನನ್ನ ಪ್ರಗತಿಪರ ಗೆಳೆಯರೇ ಪ್ರತಿಭಟಿಸಿದ್ದರು. ಅದಕ್ಕೆ ಕಾರಣ ನನ್ನ ಜಾತಿ. ಬ್ರಾಹ್ಮಣನನ್ನು ಸಮ್ಮೇಳನಾಧ್ಯಕ್ಷನನ್ನಾಗಿ ಆಯ್ಕೆ ಮಾಡಿದ್ದಾರೆ ಎಂದು ವಿರೋಧಿಸಿದ್ದರು. ಲೇಖಕರಾದ ಉಜ್ಜಜ್ಜಿ ರಾಜಣ್ಣ, ನಟರಾಜ್ ಹುಳಿಯಾರ್, ಕೆ.ಟಿ. ಶಿವಪ್ರಸಾದ್, ಸಿದ್ಧಲಿಂಗಯ್ಯ, ಎಸ್.ಜಿ. ಸಿದ್ಧರಾಮಯ್ಯ ಮತ್ತಿತರರು ನನ್ನ ಪರ ಬಲವಾಗಿ ನಿಂತರು.

ಚಳವಳಿಗಳಲ್ಲಿ ಸಕ್ರಿಯನಾಗಿದ್ದಾಗಲೂ ಜಾತಿಯ ಕಾರಣದಿಂದ ನಾನು ಪದೇ ಪದೇ ನನ್ನ ನಿಲುವುಗಳನ್ನು ಬಹಿರಂಗವಾಗಿ ಸಾಬೀತುಪಡಿಸಿಕೊಳ್ಳಬೇಕಿತ್ತು. ಇದು ಸಂಕಟದ ವಿಚಾರ. ಅಂದು ಪ್ರತಿಭಟಿಸಿದವರು ಇಂದಿಗೂ ನನ್ನ ಸ್ನೇಹಿತರೇ ಆಗಿದ್ದಾರೆ. ದೇಶ ಎಷ್ಟೇ ಅಭಿವೃದ್ಧಿಯಾದರೂ ಜಾತಿ ಮತ್ತು ಅಸ್ಪೃಶ್ಯತೆಯ ಪಿಡುಗಿನಿಂದ ಹೊರಬರದಿದ್ದರೆ ಭಾರತ ನಿರ್ಮಾಣ ಸಾಧ್ಯವಿಲ್ಲ. ಮನಸ್ಸುಗಳೇ ಕೊಳಕಾಗಿದ್ದಾಗ ನಾವು ದೇಶ ಹೇಗೆ ಕಟ್ಟಲು ಸಾಧ್ಯವಾಗುತ್ತದೆ?

◆ ತುಮಕೂರನ್ನು ಕೇಂದ್ರವಾಗಿಟ್ಟುಕೊಂಡು ಬಯಲು ಸೀಮೆಗೆ ರಂಗಾಯಣ ಬೇಕು ಎಂದು ಧ್ವನಿ ಎತ್ತಿದ್ದೀರಿ. ಈಗ ಇರುವ ರಂಗಾಯಣಗಳಲ್ಲಿ ಕೊರತೆ ಕಾಣುತ್ತಿದೆಯೇ?

ಇದು ಕೊರತೆಯ ಪ್ರಶ್ನೆಯಲ್ಲ. ಬಯಲು ಸೀಮೆಯ ಸಾಂಸ್ಕೃತಿಕ ಅಭಿವ್ಯಕ್ತಿಯ ಅಧ್ಯಯನ ಇನ್ನೂ